ಇ) 2002–03ನೇ ಸಾಲಿನಲ್ಲಿ ಉತ್ಪಾದನೆಯಾದ ಸಕ್ಕರೆ 7065 ಟನ್ ಬೀದರ್ ಡಿಸಿಸಿ ಬ್ಯಾಂಕ್‌ಗೆ ಒಡವಿಟ್ಟು ರೂ. 203.00 ಲಕ್ಷಗಳ ಸಾಲವನ್ನು ಪಡೆದು ರೈತರ ಕಬ್ಬಿನ ಬಿಲ್ಲನ್ನು ಪಾವತಿಸಿದೆ.

ರಾಜ್ಯದಲ್ಲಿ ಸುಗಂಧ ಸಸ್ಯಗಳ ರಫ್ತು ವಲಯ ಸ್ಥಾಪನೆ

562 (4871) : ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸುಗಂಧ ಸಸ್ಯಗಳ ರಫ್ತು ವಲಯ ನಿರ್ಮಿಸಲು ಸರ್ಕಾರ ಯೋಜನೆಯನ್ನು ತಯಾರಿಸಿದೆಯೇ?

ಆ) ಹಾಗಿದ್ದಲ್ಲಿ ಯೋಜನೆಯ ಅಂದಾಜು ವೆಚ್ಚ ಎಷ್ಟು?

ಇ) ಈ ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿದೆ?

ಈ) ಹಾಗಿದ್ದಲ್ಲಿ ಯಾವಾಗ ಕಳುಹಿಸಲಾಗಿದೆ.

ಉ) ಕೇಂದ್ರ ಸರ್ಕಾರದಿಂದ ಅನುಮತಿ ದೊರಕಿದೆಯೇ?

ಊ) ಇಲ್ಲದಿದ್ದಲ್ಲಿ ಅನುಮತಿ ಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಋ) ಈ ಉದ್ದೇಶಿತ ರಫ್ತುವಲಯ ನಿರ್ಮಿಸಿರುವುದರಿಂದ ಆಗತಕ್ಕ ಪ್ರಯೋಜನಗಳೇನು?

ಎ) ರಾಜ್ಯ ಸರ್ಕಾರ ಇದಕ್ಕಾಗಿ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ತಯಾರಿಸಿದೆ.

ಆ) ಅಂದಾಜು ವೆಚ್ಚವು ರೂ. 22.53 ಕೋಟಿಗಳಾಗಿರುತ್ತದೆ.

ಇ) ಹೌದು

ಈ) ಏಪ್ರಿಲ್ 2003 ರಲ್ಲಿ ಕಳುಹಿಸಲಾಗಿದೆ.

ಉ) ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಮೂರ್ಪಾಡು, ರಫ್ತು ಮಾರುಕಟ್ಟೆ ವಿವರ ಮತ್ತಿತರೆ ವಿವರಗಳನ್ನು ಕೇಂದ್ರ ಸರ್ಕಾರವು ಕೋರಿದ್ದು ಈ ವಿವರಗಳನ್ನು ಸಲ್ಲಿಸಲಾಗಿದೆ.

ಋ) ಉದ್ದೇಶಿತ ಸುಗಂಧ ಸಸ್ಯಗಳ ರಫ್ತುವಲಯ ಸ್ಥಾಪನೆಯಿಂದ ನಿಸರ್ಗದಲ್ಲಿ ಹಾಳಾಗುತ್ತಿರುವ ಈ ಸಸ್ಯ ಸಂಪತ್ತಿನ ಸಂರಕ್ಷಣೆ ರೈತರಿಗೆ ಉತ್ತಮ ಗುಣಮಟ್ಟದ ಸಸಿಗಳ ದೊರೆಯುವಿಕೆ. ಸುಗಂಧ ಸಸ್ಯಗಳ ಸಂಗ್ರಹಣೆ ಶೇಖರಣೆ, ಸಂಸ್ಕರಣೆ ಹಾಗೂ ಮೌಲ್ಯ ಹೆಚ್ಚಳದ ಮೂಲ ಸೌಕರ್ಯಕ್ಕೆ ಸಹಾಯ, ರೈತರಿಗೆ ದೊರೆಯುವ ಆದಾಯದಲ್ಲಿ ಹೆಚ್ಚಳ ವಿದೇಶಿ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ಹಾಗೂ ವಿದೇಶಿ ವಿನಿಮಯಗಳಿಸಲು ಸಹಾ ಸಾಧ್ಯವಾಗುತ್ತದೆ.

ಎ) ರಾಜ್ಯ ಸರ್ಕಾರವು ಸುಗಂಧ ಸಸ್ಯಗಳ ಕೃಷಿ ರಫ್ತುವಲಯ ಸ್ಥಾಪನೆಗೆ ರೂ. 570 ಲಕ್ಷವನ್ನು ಹೂಡಲು ಉದ್ದೇಶಿಸಿದೆ.

ರಾಜ್ಯದ ದ್ರಾಕ್ಷಿ ಬೆಳಗಾರರ ಸಮಸ್ಯೆ ಕುರಿತು

564 (4856) : ಶ್ರೀ ಭರಮಗೌಡ ಅ ಕಾಗೆ (ಕಾಗವಾಡ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?